## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

| | |
|---|---|
| **Spl. C No.** | **561/2023** |

| | | |
|---|---|---|
| ಸಾಕ್ಷಿದಾರರ ಹೆಸರು | ಕಲ್ಲೇಶ್ | |
| ತಂದೆಯ ಹೆಸರು | ಚಂದ್ರಪ್ಪ | ಸಾಕ್ಷಿಗೆ ದಿಃ20.12.2023 ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 27 ವರ್ಷ | |
| ಉದ್ಯೋಗ | ಚಾಲಕ | **PW -1** |
| ವಾಸ ಸ್ಥಳ | ತಿಗರಪಾಳ್ಯ, ಪೀಣ್ಯ 2 ನೇ ಹಂತ ಬೆಂಗಳೂರು | **CW- 1** |

**ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ದೇವಾಂಗ ಜಾತಿಗೆ ಸೇರಿದವನಿರುತ್ತೇನೆ. ಚಾಸಾ5 ಉಷಾ ನನ್ನ ಅಕ್ಕನಾಗಬೇಕು. ನನ್ನ ಅಕ್ಕ ಉಷಾ ಇವಳ ಗಂಡನ ಹೆಸರು ಕೇಶವಮೂರ್ತಿ ಎಂದು ಇರುತ್ತದೆ. ನನ್ನ ಅಕ್ಕನದ್ದು ಪ್ರೇಮ ವಿವಾಹವಿರುತ್ತದೆ. ನನ್ನ ಅಕ್ಕನ ಗಂಡ ಕೇಶವಮೂರ್ತಿ ಇವರು ಪರಿಶಿಷ್ಟ ಜಾತಿಯ ಮಾದಿಗ ಜಾತಿಯವರು ಇರುತ್ತಾರೆ. ನನ್ನ ಅಕ್ಕ ವಿವಾಹವಾದ ನಂತರ ಕೇಶವಮೂರ್ತಿ ಇವರ ಮನೆಯಲ್ಲಿ ವಾಸವಾಗಿದ್ದರು. ಕೇಶವಮೂರ್ತಿ ಇವರು ಚಾಲಕ ವೃತ್ತಿ ಮಾಡುತ್ತಿದ್ದರು. ನಂತರ ನನ್ನ ಅಕ್ಕ ಮತ್ತು ಕೇಶವಮೂರ್ತಿ ಇವರು ಪೀಣ್ಯ 2 ನೇ ಹಂತದ ತಿಗಳರಪಾಳ್ಯದಲ್ಲಿ ಬಂದು ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದರು.

2. ಚಾಸಾ-35 ಮುನಿರಾಜು ನನ್ನ ಅಕ್ಕನ ಗಂಡ ಕೇಶವಮೂರ್ತಿ ಇವರ ತಾಯಿಯ ತಮ್ಮ ಇರುತ್ತಾರೆ. ಚಾಸಾ-36 ರಾಧ ಇವರು ಚಾಸಾ-35 ಮುನಿರಾಜು ಇವರ ಮಗಳು ಇರುತ್ತಾರೆ. ಚಾಸಾ-36 ರಾಧ ಇವಳನ್ನು ನ್ಯಾಯಾಲಯದ ವಿಸಿಯಲ್ಲಿ

ಕಾಣುತ್ತಿರುವ ಆರೋಪಿಯೊಂದಿಗೆ ವಿವಾಹವಾಗಿತ್ತು. ರಾಧ ಮತ್ತು ಆರೋಪಿ ಪ್ರೇಮ ವಿವಾಹ ಮಾಡಿಕೊಂಡಿದ್ದರು. ಆರೋಪಿ ಮತ್ತು ರಾಧ ಇವರು ಹೆಸರಘಟ್ಟದ ಬಳಿ ಇರುವ ಮಣಿಕತ್ತೂರು ಗ್ರಾಮದಲ್ಲಿ ವಾಸವಾಗಿದ್ದರು.

3. ಆರೋಪಿತನು ಮೂರು ದಿನ ಮನೆ ಬಿಟ್ಟು ಹೋಗಿದ್ದರಿಂದ ರಾಧ ಇವಳು ಕೇಶವಮೂರ್ತಿ ಇವರಿಗೆ ಫೋನ್ ಮಾಡಿ ತಿಳಿಸಿದ್ದರು. ಆರೋಪಿತನು ಪೀಣ್ಯ 2 ನೇ ಹಂತದ ಒಂದು ರೂಮ್ ನಲ್ಲಿ ಇದ್ದರು. ದಿಃ13.01.2023 ರಂದು ಕೇಶವಮೂರ್ತಿ ಇವರು ನನ್ನನ್ನು ಕರೆದು ಆರೋಪಿಯನ್ನು ಮಣಿಕತ್ತೂರಿನ ಆತನ ಮನೆಗೆ ಬಿಟ್ಟು ಬರೋಣ ಎಂದು ನನ್ನನ್ನು ಕರೆದುಕೊಂಡು ಹೋದರು. ಆರೋಪಿತನು ಪೀಣ್ಯ 2 ನೇ ಹಂತದ ಹತ್ತಿರ ಇರುವ ಮಂದಾರ ಬಾರ್ ಆಂಡ್ ರೆಸ್ಟೋರೆಂಟ್ ನಲ್ಲಿ ಇದ್ದನು. ಕೇಶವಮೂರ್ತಿ ಮತ್ತು ಭರತ್ ಇಬ್ಬರೂ ಅಲ್ಲಿ ಮದ್ಯಪಾನ ಮಾಡಿದರು. ನಾನು ಅಲ್ಲೇ ಕುಳಿತುಕೊಂಡಿದ್ದೆನು. ಕೇಶವಮೂರ್ತಿ ಈತನು ಆರೋಪಿಗೆ ನೀನು ಮನೆಗೆ ಹೋಗು ಎಂದು ಹೇಳಿದ್ದಕ್ಕೆ ಆರೋಪಿತನು ನೀನು ಯಾರು ನನಗೆ ಹೇಳುವುದಕ್ಕೆ ಎಂದು ಹೊಡೆದಾಡಿದರು. ನಾನು ಜಗಳ ಬಿಡಿಸಿದೆನು. ನಂತರ ಆರೋಪಿತನು ಮನೆಗೆ ಹೋಗಲು ಒಪ್ಪಿದನು. ನಾವು ಆರೋಪಿತನನ್ನು ಆತನ ಮನೆಗೆ ಬಿಟ್ಟು ಬರಲು ಹೊರಟೆವು.

4. ದ್ವಿಚಕ್ರ ವಾಹನದಲ್ಲಿ ನಾವು ಮೂರು ಜನರು ಸೇರಿ ಆರೋಪಿತನ ಮನೆಗೆ ಹೋಗುವಾಗ ಸೋಲದೇವನಹಳ್ಳಿ ಬಳಿ ಇರುವ ಹಿಮಾಲಯ ಡಾಬಾದ ಬಳಿ ಇರುವ ಚಿಗರಿ ವೈನ್ಸ್ ನಲ್ಲಿ ಮತ್ತೆ ಆರೋಪಿ ಮತ್ತು ಕೇಶವಮೂರ್ತಿ ಇವರು ಮದ್ಯಪಾನ ಮಾಡಿದರು. ಬಾರ್ ನಿಂದ ಹೊರಗಡೆ ಬಂದಾಗ ಕೇಶವಮೂರ್ತಿ ಇವರು ಫೋನಿನಲ್ಲಿ ಮಾತನಾಡಿದ್ದರು. ಆರೋಪಿತನು ಮೊದಲು ನನಗೆ ಚಾಕುವಿನಿಂದ ಹೊಟ್ಟೆಯ ಮೇಲೆ ಚುಚ್ಚಿದನು. ನನಗೆ ಗಾಯವಾಗಿ ಪ್ರಜ್ಞೆ ತಪ್ಪಿತು. ಅಲ್ಲಿಂದ ನನ್ನನ್ನು ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದರು.

5. ಆರೋಪಿತನು ಕೇಶವಮೂರ್ತಿ ಇವರಿಗೂ ಕೂಡ ಚಾಕುವಿನಿಂದ ಚುಚ್ಚಿದ್ದರಿಂದ ಕೇಶವಮೂರ್ತಿ ಮೃತಪಟ್ಟಿದ್ದಾನೆ ಎಂದು ನಾನು ಆಸ್ಪತ್ರೆಯಲ್ಲಿ ಇದ್ದಾಗ ನನಗೆ ತಿಳಿಸಿದರು. ಆರೋಪಿ ಈಗ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಚಾಕುವನ್ನು ನೋಡಿ ಗುರ್ತಿಸಿದ್ದು ಅದನ್ನು ಮು.ಮಾ-1 ಎಂದು ಗುರ್ತಿಸಲಾಯಿತು. ನಾನು ಧರಿಸಿದ್ದ ಬಟ್ಟೆಗಳಿಗೆ ರಕ್ತ ಕಲೆಯಾಗಿತ್ತು. ಆ ದಿನ ನಾನು ಶರ್ಟ್, ಬನಿಯನ್, ಪ್ಯಾಂಟ್ ಮತ್ತು ಜರ್ಕೀನ್ ಧರಿಸಿದ್ದೆನು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಜರ್ಕೀನ್, ಪ್ಯಾಂಟ್, ಶರ್ಟ್ ಮತ್ತು ಬನಿಯನ್‌ಗಳನ್ನು ನೋಡಿ ತನ್ನ ಬಟ್ಟೆಗಳೆಂದು ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮಾ-2 ರಿಂದ 5 ಎಂದು ಗುರ್ತಿಸಲಾಯಿತು.

6. ನಾನು ಸಪ್ತಗಿರಿ ಆಸ್ಪತ್ರೆಯಲ್ಲಿ ಸುಮಾರು ಒಂದು ತಿಂಗಳುಗಳ ಕಾಲ ಚಿಕಿತ್ಸೆ ಪಡೆದನು. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರ ಮುಂದೆ ಫಿರ್ಯಾದಿಯ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಫಿರ್ಯಾದಿ ಹೇಳಿಕೆ ನೋಡಿ ಗುರುತಿಸಿದ್ದು ಫಿರ್ಯಾದಿ ಹೇಳಿಕೆಯನ್ನು ನಿಶಾನೆ ಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರ್ತಿಸಲಾಯಿತು.

7. ಆರೋಪಿ ನನಗೆ ಚಾಕುವಿನಿಂದ ಚುಚ್ಚಿದಾಗ ಸಮಯ ರಾತ್ರಿ ಸುಮಾರು 10.30 ಘಂಟೆ ಆಗಿತ್ತು. ನನಗೆ ಆರೋಪಿ ಚುಚ್ಚಿದ್ದನ್ನು ಆ ದಿನ ಲೈಟಿನ ಬೆಳಕಿನಲ್ಲಿ ನೋಡಿರುತ್ತೇನೆ.

8. ಆರೋಪಿ ಕೇಶವಮೂರ್ತಿ ಇವರ ಹೊಟ್ಟೆಗೆ, ಎದೆಗೆ, ಕತ್ತಿನ ಹತ್ತಿರ ಚಾಕುವಿನಿಂದ ಚುಚ್ಚಿರುತ್ತಾನೆ. ಆರೋಪಿತನು ಚಾಕುವಿನಿಂದ ಕೇಶವಮೂರ್ತಿ ಇವರಿಗೆ ಹಲ್ಲೆ ಮಾಡಿದ್ದರಿಂದ ಕೇಶವಮೂರ್ತಿ ಮೃತಪಟ್ಟಿರುತ್ತಾರೆ.

9. ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸಿ ಆರೋಪಿತನು ತಿಗಳರ ಜಾತಿಗೆ ಸೇರಿದವನು ಇರುತ್ತಾನೆ ಎಂದು ಹೇಳುತ್ತಾರೆ.

10. ಕೇಶವಮೂರ್ತಿ ಇವರು ಆರೋಪಿಗೆ ಮನೆಗೆ ಹೋಗು ಎಂದು ಬುದ್ದಿವಾದ ಹೇಳಿದ್ದರು. ಆರೋಪಿ ಕೇಶವಮೂರ್ತಿ ಇವರಿಗೆ ನೀನು ಯಾರು ನನಗೆ ಹೇಳೋಕೆ ಎಂದು ಜಗಳ ಮಾಡಿ ಹೊಡೆದಾಡಿದರು. ನಂತರ ಅವರಿಬ್ಬರೂ ಚೆನ್ನಾಗಿ ಮಾತನಾಡಿಸಿದರು. ಮತ್ತೆ ಹಿಮಾಲಯ ಡಾಬಾ ಹತ್ತಿರ ಚಿಗರಿ ವೈನ್ಸ್ ಹತ್ತಿರ ಕೇಶವಮೂರ್ತಿ ಮತ್ತು ಆರೋಪಿ ಮತ್ತೆ ಮದ್ಯಪಾನ ಮಾಡಿ ಜಗಳ ಮಾಡಿದರು. ನಂತರ ಚಿಗರಿ ವೈನ್ಸ್ ನಿಂದ ಹೊರಗಡೆ ಬಂದಾಗ ಆರೋಪಿ ನನಗೆ ಚಾಕುವಿನಿಂದ ಚುಚ್ಚಿ ನಂತರ ಕೇಶವಮೂರ್ತಿ ಕಡೆ ಓಡಿ ಹೋದನು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನೀಡಿರುವುದರಿಂದ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

11. ಚಿಗರಿ ವೈನ್ಸ್ ಶಾಪ್ ನಿಂದ ಹೊರಗಡೆ ಬಂದಾಗ ನನ್ನ ಮಕ್ಕಳಾ ನನಗೆ ಬುದ್ದಿ ಹೇಳುತ್ತೀರಾ, ನಿಮ್ಮನ್ನು ಮರ್ಡರ್ ಮಾಡದೇ ಬಿಡುವುದಿಲ್ಲ ಎಂದು ನನಗೆ ಚಾಕುವಿನಿಂದ ಚುಚ್ಚಿ ಗಾಯಪಡಿಸಿದನು ಎಂದರೆ ಸರಿ ಇದೆ. ನಂತರ ಆರೋಪಿತನು ಕೇಶವಮೂರ್ತಿ ಈತನನ್ನು ಬೆನ್ನಟ್ಟಿಕೊಂಡು ಹೋಗಿ ಮು.ಮಾ-1 ಚಾಕುವಿನಿಂದ ಕೇಶವಮೂರ್ತಿ ಇವರ ಹೊಟ್ಟೆಗೆ, ಎದೆಗೆ, ಕುತ್ತಿಗೆಗೆ ಚುಚ್ಚಿ ನಂತರ ಆರೋಪಿ ಆತನ ಬೈಕಿನಲ್ಲಿ ಹೊರಟು ಹೋದನು ಎಂದರೆ ಸರಿ ಇದೆ. ನಾನು ಮತ್ತು ಕೇಶವಮೂರ್ತಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದೆವು ಎಂದರೆ

ಸರಿ ಇದೆ. ಕೇಶವಮೂರ್ತಿ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದರೆ ಸರಿ ಇದೆ. ನಂತರ ನಾನು ನಿಶಾನೆ ಪಿ-1 ರಂತೆ ದೂರು ನೀಡಿದ್ದೇನೆ ಎಂದರೆ ಸರಿ ಇದೆ.

12. ಈ ಸಮಯಕ್ಕೆ ಸಾಕ್ಷಿಗೆ ಒಂದು ಫೋಟೋ ತೋರಿಸಿದ್ದು ಸಾಕ್ಷಿ ಸದರಿ ಫೋಟೋವನ್ನು ನೋಡಿ ಸದರಿ ಫೋಟೋದಲ್ಲಿ ಕಾಣುವ ಮೋಟಾರ್ ಸೈಕಿನಲ್ಲಿ ಆರೋಪಿ ಓಡಿ ಹೋದನು ಎಂದು ಒಪ್ಪಿಕೊಂಡಿದ್ದರಿಂದ ಸದರಿ ಫೋಟೋವನ್ನು ನಿಶಾನೆ ಪಿ-2 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ**

**ಶ್ರೀಮತಿ ಎಂಎನ್‌ವಿರವರಿಂದಃ**

13. ಕೇಶವಮೂರ್ತಿ ಇವರು ನನ್ನ ಅಕ್ಕನ ಗಂಡ ಎಂದರೆ ಸರಿ ಇದೆ. ನನ್ನ ಅಕ್ಕ ಕೇಶವಮೂರ್ತಿರವರನ್ನು ಮದುವೆಯಾಗುವುದು ನಮ್ಮ ಕುಟುಂಬದವರಿಗೆ ಇಷ್ಟ ಇರಲಿಲ್ಲ ಎಂದರೆ ಸರಿ ಇದೆ. ಕೇಶವಮೂರ್ತಿ ಇವರು ತುಂಬಾ ಮದ್ಯವ್ಯಸನಿ ಆಗಿದ್ದರು ಎಂದರೆ ಸರಿಯಲ್ಲ. ನನಗೂ ಮದ್ಯಪಾನ ಮಾಡುವ ಅಭ್ಯಾಸ ಇದೆ ಎಂದರೆ ಸರಿ ಇದೆ. ನಮ್ಮ ಮನೆಯವರ ಮತ್ತು ಕೇಶಮೂರ್ತಿಯವರ ಮಧ್ಯೆ ಆಗಾಗ ಜಗಳ ಆಗುತ್ತಿತ್ತು ಎಂದರೆ ಸರಿಯಲ್ಲ.

14. ಶ್ರೀಮತಿ ರಾಧ ಇವರು ಯಾವ ಫೋನ್ ನಂಬರಿನಿಂದ ಕೇಶವಮೂರ್ತಿ ಇವರಿಗೆ ಕರೆ ಮಾಡಿದ್ದರು ಎಂದು ನನಗೆ ಫೋನ್ ನಂಬರ್ ಅನ್ನು ಹೇಳಲು ಆಗುವುದಿಲ್ಲ. ಘಟನೆಯ ಕಾಲಕ್ಕೆ ಆರೋಪಿ ಮತ್ತು ಆತನ ಹೆಂಡತಿ ದೂರವಾಗಿ ಮೂರು ವರ್ಷಗಳಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಶ್ರೀಮತಿ ರಾಧ ಇವರು ಕೇಶವಮೂರ್ತಿ ಇವರಿಗೆ ನನ್ನ ಗಂಡ ಮನೆಗೆ ಬರುತ್ತಿಲ್ಲ ಆತನನ್ನು ಕರೆದುಕೊಂಡು ಬನ್ನಿ ಎಂದು ಫೋನ್ ಕರೆ ಮಾಡಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ ನಾನು ಮತ್ತು ಕೇಶಮೂರ್ತಿ ಮಾತ್ರ ಮಂದಾರ ಬಾರ್ ಬಳಿ ಮದ್ಯಪಾನ ಮಾಡಲು

ಹೋಗಿದ್ದೆವು ಎಂದರೆ ಸರಿಯಲ್ಲ. ಸದರಿ ಮಂದಾರ ಬಾರ್ ಬಳಿ ಆರೋಪಿ ಬಂದಿರಲಿಲ್ಲ ಎಂದರೆ ಸರಿಯಲ್ಲ.

15. ಸಾಮಾನ್ಯವಾಗಿ ಬಾರ್ ಮತ್ತು ಡಾಬಾಗಳಲ್ಲಿ ಸಿಸಿಟಿವಿ ಅಳವಡಿಸುತ್ತಾರೆ ಎಂದರೆ ಸರಿ ಇದೆ. ನಾನು, ಆರೋಪಿ ಮತ್ತು ಕೇಶಮೂರ್ತಿ ಸೇರಿ ಮೂರು ಜನ ಒಂದೇ ಬೈಕ್ ನಲ್ಲಿ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಹಿಮಾಲಯ ಡಾಬಾ ಬಳಿ ಇರುವ ಚಿಗರಿ ವೈನ್ಸ್ ಗೆ ಆರೋಪಿ ಬಂದಿರಲಿಲ್ಲ ನಾನು ಮತ್ತು ಕೇಶವಮೂರ್ತಿ ಮಾತ್ರ ಹೋಗಿದ್ದೆವು ಎಂದರೆ ಸರಿಯಲ್ಲ. ಚಿಗರಿ ವೈನ್ಸ್ ಬಳಿ ಯಾವುದೇ ಜಗಳವಾಗಿಲ್ಲ ಆರೋಪಿತನು ನನಗೆ ಚಾಕುವಿನಿಂದ ಚುಚ್ಚಿಲ್ಲ ಎಂದರೆ ಸರಿಯಲ್ಲ.

16. ಮು.ಮಾ-1 ತರಹದ ಚಾಕುಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ಸರಿ ಇದೆ. ಆರೋಪಿ ನನಗೆ ಚಾಕುವಿನಿಂದ ಚುಚ್ಚಿಲ್ಲ ನಾನು ಸಪ್ತಗಿರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ-2 ರಿಂದ 5 ಬಟ್ಟೆಗಳನ್ನು ನಾನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ನಿಶಾನೆ ಪಿ-1 ರಂತೆ ಫಿರ್ಯಾದಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

17. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಕೇಶವಮೂರ್ತಿ ಮೃತಪಟ್ಟ ಬಗ್ಗೆ ನನಗೆ ಆಸ್ಪತ್ರೆಯಲ್ಲಿ ಯಾರೂ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನನ್ನು ಲೈಟಿನ ಬೆಳಕಿನಲ್ಲಿ ನೋಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ನಾನು ಆರೋಪಿಯನ್ನು ಇದೇ ಮೊದಲ ಬಾರಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ:ಇಲ್ಲ</u>**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.